ಈ) ಉದ್ಭವಿಸುವುದಿಲ್ಲ.

ಸೋಮವಾರಪೇಟೆಯ ಕುಶಾಲನಗರದ ನಿಸರ್ಗ ಧಾಮದ ಬಗ್ಗೆ

(2065): ಶ್ರೀ ಬೆಳ್ಳಿಯಪ್ಪ (ಸೋಮವಾರಪೇಟೆ):–

ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೋಮವಾರ ಪೇಟೆ ತಾಲ್ಲೂಕಿನ ಕುಶಾಲನಗರದಲ್ಲಿ ನಿಸರ್ಗ ಧಾಮಕ್ಕೆ ಇದುವರೆವಿಗೂ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

ಆ) ಮಂಜೂರಾಗಿರುವ ಪೂರ್ಣ ಹಣವು ಖರ್ಚಾಗಿದೆಯೇ ? ಹಾಗೂ ಸಮರ್ಪಕವಾಗಿ ಉಪಯೋಗಿಸಲಾಗಿದೆಯೇ;

ಇ) ಇನ್ನೂ ಇದರ ಅಭಿವೃದ್ಧಿಗೆ ಸರ್ಕಾರವು ಹಣ ಬಿಡುಗಡೆ ಮಾಡುವ ಉದ್ದೇಶವಿದೆಯೇ;

ಈ) ಹಾಗಿದ್ದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗುವುದು ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯಸಚಿವರು):–

ಅ) ಸೋಮವಾರಪೇಟೆ ತಾಲ್ಲೂಕಿನ ಕುಶಾಲನಗರದಲ್ಲಿರುವ "ನಿಸರ್ಗ ಧಾಮ"ಕ್ಕೆ ಇದುವರೆವಿಗು ಖರ್ಚು ಮಾಡಿದ ಹಣದ ವಿವರ ಈ ರೀತಿ ಇದೆ.

ವರ್ಷ	ಖರ್ಚಾದ ಹಣದ ವಿವರ
1988–89	ರೂ. 1,61,241 - 20
1989–90	ರೂ. 9,79,640 - 00
1990–91	ರೂ. 1,04,054 - 75
1991–92	ರೂ. 1,70,014 - 00
1992–93 (ದಿ.10-3-93ರವರೆಗೆ)	ರೂ. 5,22,355-00

1988-89 ರಿಂದ 1992-93ರ ಮಾರ್ಚ್ 10ನೇ ತಾರೀಖಿನವರೆಗೆ ರೂ. 19,37,495-00ನ್ನು ಖರ್ಚು ಮಾಡಲಾಗಿದೆ.

ಆ) ಮಂಜೂರಾಗಿರುವ ಪೂರ್ಣ ಹಣವು ಖರ್ಚಾಗಿರುತ್ತದೆ. ಹಾಗೂ ಸಮರ್ಪಕವಾಗಿ ಉಪಯೋಗವಾಗಿರುತ್ತದೆ.

ಇ) ಇದರ ಅಭಿವೃದ್ಧಿಗಾಗಿ ಇನ್ನೂ ರೂ. 35 ಲಕ್ಷ ಮಂಜೂರು ಮಾಡಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ:ಡಿ 5 : ಬಯುಡಿ:ಸಿಆರ್:29:89-90, ದಿನಾಂಕ: 16-9-92ರಲ್ಲಿ ಸರ್ಕಾರವನ್ನು ಕೋರಿರುವರು.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.